ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
Directorate of Medical Education.

ಆನಂದರಾವ್ ವೃತ್ತ, ಬೆಂಗಳೂರು-9
Ananda Rao Circle, Bangalore-9
email: dmekarnataka@yahoo.com
Ph: 080 22870060

ಸಂಖ್ಯೆ: ವೈಶಿನಿ/ಎನ್ಆರ್‌ಸಿ(2)/22/2017-18

ದಿನಾಂಕ: 14-12-2017

ಇವರಿಗೆ,

1. ರಿಜಿಸ್ಟ್ರಾರ್,
   ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತು,
   ನೈಟಿಂಗೇಲ್ ಟವರ್,
   ಆನಂದರಾವ್ ಬಡಾವಣೆ,
   ಬೆಂಗಳೂರು-09

2. ವಿಶೇಷಾಧಿಕಾರಿಗಳು,
   ಕರ್ನಾಟಕ ರಾಜ್ಯ ಶುಶ್ರೂಷ ಪರೀಕ್ಷಾ ಮಂಡಳಿ,
   ಗ್ರಂಥಾಲಯ ಕಟ್ಟಡ,
   ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು
   ಸಂಶೋಧನಾ ಸಂಸ್ಥೆ,
   ಬೆಂಗಳೂರು-560002.

ಮಾನ್ಯರೆ,

**ವಿಷಯ:-** 2017-18ನೇ ಸಾಲಿನ ಶುಶ್ರೂಷಾ ತರಬೇತಿಯ ಸರ್ಕಾರಿ ಕೋಟಾದಡಿಯಲ್ಲಿ ಖಾಲಿ ಉಳಿಯುವ ಸೀಟುಗಳನ್ನು ಆಡಳಿತ ಮಂಡಳಿಯಿಂದ ಭರ್ತಿಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.

**ಉಲ್ಲೇಖ:-** ಖಾಸಗಿ ನರ್ಸಿಂಗ್ ಶಾಲೆಗಳ ಮನವಿ.

* * * * *

2017-18ನೇ ಸಾಲಿನಲ್ಲಿ ಖಾಲಿ ಉಳಿದಿದ್ದ ಸರ್ಕಾರಿ ಕೋಟಾದ ಸೀಟುಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಭರ್ತಿ ಮಾಡಲು ಈ ನಿರ್ದೇಶನಾಲಯದ ಪತ್ರ ದಿನಾಂಕ: 13-09-2017ರಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ನೀಡಲಾಗಿರುತ್ತದೆ. ಪ್ರಸ್ತುತ ಉಲ್ಲೇಖಿತ ಮನವಿಗಳಲ್ಲಿ ಕೆಲವು ನರ್ಸಿಂಗ್ ಶಾಲೆಗಳು ಸರ್ಕಾರಿ ಕೋಟಾದಲ್ಲಿ ಖಾಲಿ ಉಳಿದಿರುವ ಸೀಟುಗಳನ್ನು ಆಡಳಿತ ಮಂಡಳಿಯಿಂದ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡುವಂತೆ ಕೋರಿರುತ್ತವೆ.

KNC website

ಸಮಾಜ ಕಲ್ಯಾಣ ಇಲಾಖಾ ವತಿಯಿಂದ ನಿಯೋಜಿಸಲ್ಪಟ್ಟ ಅಭ್ಯರ್ಥಿಗಳನ್ನು ಪ್ರವೇಶ ಪಡಿಸಿಕೊಂಡಿರುವ ಬಗ್ಗೆ ಖಾತರಿ ಪಡಿಸಿಕೊಂಡ ನಂತರ ಸರ್ಕಾರಿ ಕೋಟಾದಲ್ಲಿ ಖಾಲಿ ಉಳಿದ ಸೀಟುಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 44 ಎಂಪಿಎಸ್ 2003(3), ದಿನಾಂಕ: 03/07/2003ರ ಶುಶ್ರೂಷ ತರಬೇತಿ ಆಯ್ಕೆ ನಿಯಮಾವಳಿಯ ಕ್ರಮ ಸಂಖ್ಯೆ: 13ರ ಅನ್ವಯ ಆಡಳಿತ ಮಂಡಳಿಯಿಂದ ಭರ್ತಿಮಾಡಿಕೊಳ್ಳಲು ಅನುಮತಿ ನೀಡಲು ಕ್ರಮವಹಿಸಬೇಕಾಗಿರುತ್ತದೆ.

. . . . . 2



ಆದುದರಿಂದ 2017-18ನೇ ಸಾಲಿನಲ್ಲಿ ಸರ್ಕಾರಿ ಕೋಟಾದಡಿಯಲ್ಲಿ ಖಾಲಿ ಉಳಿದಿದ್ದ ಸೀಟುಗಳ ಭರ್ತಿಗೆ ಈ ನಿರ್ದೇಶನಾಲಯದ ಅನುಮತಿ ಪಡೆಯುವಂತೆ ಎಲ್ಲಾ ಸಂಸ್ಥೆಗಳಿಗೆ ಸೂಚನೆ ನೀಡಿ ಸುತ್ತೋಲೆ ಹೊರಡಿಸುವಂತೆ ಈ ಮೂಲಕ ಸೂಚಿಸುತ್ತಾ ಈ ನಿರ್ದೇಶನಾಲಯದ ಅನುಮತಿ ಪಡೆಯದ ಸಂಸ್ಥೆಗಳ ಪ್ರವೇಶ ಪಟ್ಟಿಗೆ ಅನುಮೋದನೆ ನೀಡಬಾರದೆಂದು ತಿಳಿಸಿದೆ. (ಈ ಪ್ರತಿಯನ್ನು ಕರ್ನಾಟಕ ರಾಜ್ಯ ಪರಿಷತ್ ಮತ್ತು ಪರೀಕ್ಷಾ ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು)

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ನಿರ್ದೇಶಕರು, ವೈದ್ಯಕೀಯ ಶಿಕ್ಷಣ.

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:-**

1. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಶುಶ್ರೂಷ ಮಂಡಳಿ, ಗ್ರಂಥಾಲಯ ಕಟ್ಟಡ, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು-560002.
2. ಪ್ರಾಚಾರ್ಯರು, ಪದವಿಪೂರ್ವ ತರಬೇತಿ ಕೇಂದ್ರ, ಅಂಬೇಡ್ಕರ್ ಭವನ, ವಸಂತನಗರ, ಬೆಂಗಳೂರು ಇವರಿಗೆ ಸಲ್ಲಿಸುತ್ತಾ 2017-18ನೇ ಸಾಲಿನಲ್ಲಿ ಸರ್ಕಾರಿ ಕೋಟಾದಡಿಯಲ್ಲಿ ಆಯ್ಕೆ ಮಾಡಲಾದ ಶುಶ್ರೂಷ ವಿದ್ಯಾರ್ಥಿಗಳ ಶಾಲಾವಾರು ಅಂಕಿ ಅಂಶ ಒದಗಿಸುವಂತೆ ತಿಳಿಸಿದೆ.
3. ಕಛೇರಿ ಪ್ರತಿ.